## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

**ಸಿ.ಸಿ. 1/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ | ಪ್ರಾ ಸಾಃ 3 |
| ತಂದೆಯ/ಗಂಡನ ಹೆಸರು | : | ಲೋಕೇಶ್ವರಪ್ಪ | ಚಾಸಾಃ 3 |
| ವಯಸ್ಸು | : | 34 ವರ್ಷ | |
| ಕೆಲಸ | : | ವರ್ಕ್‌ಶಾಪ್ ಕೆಲಸ | ಸಾ ಪ್ರ ಬೋ |
| ವಾಸ | : | ಅರಸನಘಟ್ಟ ಗ್ರಾಮ | ದಿಃ23.01.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಈ ಪ್ರಕರಣದ ಆರೋಪಿತರು ಗೊತ್ತಿಲ್ಲ. ಚಾಸಾ.2 ಗೊತ್ತು. ಸಾಕ್ಷಿ ನಿಪಿ.2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಹೊಳಲ್ಕೆರೆಯ ಪೊಲೀಸ್ ಠಾಣೆಯಲ್ಲಿ ಸುಮಾರು 3 ವರ್ಷಗಳ ಹಿಂದೆ ಮಾಡಿರುತ್ತೇನೆ. ಕೋವಿಡ್19 ಸಮಯದಲ್ಲಿ ನಾವು ಆಸ್ಪತ್ರೆಗೆ ಹೋಗಿದ್ದಾಗ ಪೊಲೀಸರು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿ ನಿಪಿ.2 ಕ್ಕೆ ನಮ್ಮ ಸಹಿಯನ್ನು ಪಡೆದಿರುತ್ತಾರೆ. ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರಿನ ಕ್ರಮವನ್ನು ಜರುಗಿಸಿಲ್ಲ ಮತ್ತು ನ್ಯಾಯಾಲಯದ ಮುಂದಿರುವ ಮುದ್ದೆಮಾಲನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮಹಜರಿನಲ್ಲಿನ ಅಂಶಗಳ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಈ ಕುರಿತು ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಿಪಿ.2 ರ ಮಹಜರಿಗೆ ನನ್ನೊಂದಿಗೆ ಚಾಸಾ.2 ರವರು ಸಹಿ ಮಾಡಿರುತ್ತಾರೆ. ನಮ್ಮನ್ನು ಹೊರತುಪಡಿಸಿ ಇತರೆ ಯಾರೂ ಸಹಿ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 27.03.2020 ರಂದು ನಾನು ಮತ್ತು ಚಾಸಾ.2 ರವರು ರಾತ್ರಿ 12.05 ರ ಸಮಯದಲ್ಲಿ ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯ ಕಡೆಯಿಂದ ಹೊಳಲ್ಕೆರೆಯ ಮುಖ್ಯ ವೃತ್ತದ ಕಡೆಗೆ ನಡೆದುಕೊಂಡು ಬರುತ್ತಿದ್ದಾಗ, ಚಾಸಾ.1 ರವರು ನಮ್ಮನ್ನು ಕರೆದು

ಮಹಜರಿಗೆ ಸಹಕರಿಸುವಂತೆ ಕೋರಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವು ಇಲಾಖಾ ಜೀಪಿನಲ್ಲಿ ರಾತ್ರಿ 12.10 ಕ್ಕೆ ಸ್ಥಳದ ಬಳಿ ಬಂದಿದ್ದು, ಚಕ್ರತೀರ್ಥ ಮಧ್ಯದ ಅಂಗಡಿಯ ಬಳಿ ಹೋಗಿ ನೋಡಲಾಗಿ ಸದರಿ ಅಂಗಡಿಗೆ ಹಾಕಿದ್ದ ಬೀಗವನ್ನು ತೆಗೆದು ಯಾರೋ ಒಳಗೆ ಹೋಗಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಚಾಸಾ.1 ರವರು ಚಾಸಾ.8 ಮತ್ತು 9 ರವರ ಮಾರ್ಗದರ್ಶನದಂತೆ ಸದರಿ ಅಂಗಡಿಯ ಒಳಗೆ ಹೋಗಿದ್ದ ಇಬ್ಬರನ್ನು ಹೊರಗೆ ಕರೆದುಕೊಂಡು ಬಂದು ನಮ್ಮ ಸಮಕ್ಷಮದಲ್ಲಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಆರೋಪಿತರಿಂದ ಅಮಾನತ್ತುಪಡಿಸಿಕೊಂಡಂತಹ ಎರಡು ಬೀಗಗಳ ಮತ್ತು ಕೀಗಳ ಕುರಿತು ನನ್ನ ಮತ್ತು ಚಾಸಾ.3 ರವರ ಸಮಕ್ಷಮ ದಿನಾಂಕ 27.03.2020 ರಂದು ರಾತ್ರಿ 12.15 ರಿಂದ 1.15 ರವರೆಗೆ ಮಹಜರಿನ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 30.03.2020 ರಂದು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ